ಇದ್ದಲ್ಲಿ 15 ದಿನದಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರೂ ಕೂಡ ಅವರು ಮಾತನಾಡಿದರೆ ಯಾವರೀತಿ ಕೆಲಸ ಮಾಡುವುದು ಹೇಳಿ.

(ಆ) ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸುಮಾರು 3000 ಮಂದಿಗೆ ಹಕ್ಕು ಪತ್ರ ವಿತರಣೆ.

+ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಚೇರ್‌ಮನ್‌ರವರೇ, ಮಾನ್ಯ ಸದಸ್ಯರಾದ ಶ್ರೀ ಯು.ಆರ್. ಸಭಾಪತಿಯವರು ಕೇಳಿದಂತಹ ಪ್ರಶ್ನೆಗೆ ಈ ಹೇಳಿಕೆಯನ್ನು ನಾನು ಇಲ್ಲಿ ನೀಡಬಯಸುತ್ತೇನೆ.

1) ಉಡುಪಿ ತಾಲ್ಲೂಕು ಪುತ್ತೂರು, ಹೆರ್ಗ, ಶಿವಳ್ಳಿ, ಬೈಲೂರು ಮತ್ತು ಮಲ್ಪೆ ಪ್ರದೇಶಗಳ 1800 ಜನ ಅನಧಿಕೃತ ಸಾಗುವಳಿದಾರರಿಗೆ ಸಕ್ರಮೀಕರಣಗೊಳಿಸುವ ಬಗ್ಗೆ.

ಉಡುಪಿ ತಾಲ್ಲೂಕಿನ ಪುತ್ತೂರು, ಹೆರ್ಗ, ಶಿವಳ್ಳಿ ಬೈಲೂರು ಮತ್ತು ಮಲ್ಪೆ ಪ್ರದೇಶಗಳಿಗೆ ಸಂಬಂಧಿಸಿದಂತೆ, ಅನಧಿಕೃತ ಸಾಗುವಳಿದಾರರಿಗೆ ಸಕ್ರಮೀಕರಣಗೊಳಿಸುವ ಕುರಿತು ಒಟ್ಟು 1425 ಅರ್ಜಿಗಳು ಬಂದಿರುತ್ತದೆ. ಡಿಸೆಂಬರ್ 1996ರಲ್ಲಿ ಉಡುಪಿಯ ನಗರ ಸಭೆಯಾಗಿ ಪರಿವರ್ತಿತವಾಗಿದ್ದು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯ್ದೆ 1964ರ ಕಲಂ 94-ಎ ಅನ್ವಯ ನಿಗಧಿಪಡಿಸಲಾದ ಮಹಾನಗರಪಾಲಿಕೆ ಮತ್ತು ನಗರ ಸಭೆಗಳ ವ್ಯಾಪ್ತಿಯಲ್ಲಿನ 5 ಕಿ.ಮೀ. ಒಳಗಿನ ಪ್ರದೇಶಗಳಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಈ ಎಲ್ಲಾ ಗ್ರಾಮಗಳು 5 ಕಿ.ಮಿ. ಒಳಗೆ ಬರುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಈ ಕೆಳಕಂಡಂತೆ ಈಗಾಗಲೇ ಸ್ಪಷ್ಟೀಕರಣ ನೀಡಿದೆ. ಭೂ ಕಂದಾಯ ಕಾಯಿದೆ 94-ಎ ರನ್ವಯದ ಉಪಬಂಧದನ್ವಯ ಈ ನಗರ ಸಭೆಗಳ ವ್ಯಾಪ್ತಿಯಲ್ಲಿ ದಿನಾಂಕ 14-4-90ಕ್ಕಿಂತ ಮುಂಚಿ 50,000 ಕ್ಕಿಂತ ಕಡಿಮೆ ಜನ ಸಂಖ್ಯೆ ಇದ್ದ ಪಕ್ಷದಲ್ಲಿ ಭೂ ಕಂದಾಯ (ತಿದ್ದುಪಡಿ) ಕಾಯ್ದೆ ಜಾರಿಗೆ ಬಂದ ದಿನಾಂಕದ 3 ತಿಂಗಳೊಳಗಾಗಿ ಜಮೀನು ಸಕ್ರಮೀಕರಣಕ್ಕಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವನ್ವಯ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಸದರಿ ಅರ್ಜಿಗಳನ್ನು ವಿಲೇ ಮಾಡಲು ತಾಲ್ಲೂಕು ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗೆ ಸೂಕ್ತ ಸ್ಪಷ್ಟೀಕರಣಗಳನ್ನು ನೀಡಲು ಕ್ರಮ ತೆಗೆದುಕೊಳ್ಳುವಂತೆ ನಿರ್ದೇಶನ ನೀಡಲಾಗಿದೆ. ದಿನಾಂಕ: 14-4-90ರಂದು ನಗರದ ಜನ ಸಂಖ್ಯೆಯು 50,000ಕ್ಕಿಂತ ಮೀರಿದ್ದರೆ ಅಂತಹ ಪ್ರದೇಶಗಳಲ್ಲಿನ ಜಮೀನುಗಳನ್ನು ಸಕ್ರಮೀಕರಣಗೊಳಿಸಲು ಅವಕಾಶಗಳಿಲ್ಲ. ಆದುದರಿಂದ ಸಂಬಂಧಪಟ್ಟ ತಹಶೀಲ್ದಾರ್‌ರವರಿಗೆ ಈ ಅರ್ಜಿಗಳನ್ನು ವಿಲೇಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ಕೋರಲಾಗಿದೆ.

2) ಉಡುಪಿ ತಾಲ್ಲೂಕು ಮಲ್ಪೆ, ಕೊಡವೂರು, ಪಡುಕೆರೆ, ಕರಾವಳಿ ಪ್ರದೇಶದ 398 ಅರ್ಜಿದಾರರಿಗೆ ಮಾನ್ಯ ಮುಖ್ಯಮಂತ್ರಿಗಳು ನೀಡಿರುವ ಆಶ್ವಾಸನೆಯಂತೆ ದಂಡನಾ ಮೌಲ್ಯ ರದ್ದುಗೊಳಿಸಿ ಹಕ್ಕುಪತ್ರ ನೀಡುವ ಬಗ್ಗೆ.

ಸರ್ಕಾರದ ಆದೇಶ ಸಂ. ಆರ್‌ಡಿ 12 ಎಲ್‌ಜಿಎ 91 ದಿನಾಂಕ : 29-9-94ರಂದು, ಮಲ್ಪೆ ಮತ್ತು ಕೊಡವೂರು, ಬೆಂಗ್ರೆಸ್ವಾಂಡ್ಸೆಜ್, ಕುಂದಾಪುರ, ಗಂಗೋಳಿಮಲ್ಲಿ ಅನಧಿಕೃತವಾಗಿ ಜಮೀನು ನಿವೇಶನ ಮಾಡುತ್ತಿರುವ ಒಟ್ಟು 2041 ಜನರಿಗೆ ಸಕ್ರಮಗೊಳಿಸಲು ಆದೇಶಿಸಲಾಗಿದೆ. ಇದರಲ್ಲಿ ಉಡುಪಿ ತಾಲ್ಲೂಕಿನ ಮಲ್ಪೆ-ಕೊಡವೂರಿಗೆ ಸಂಬಂಧಿಸಿದಂತೆ 345 ಪ್ರಯೋಜನಾರ್ಥಿಗಳಿಗೆ ಸಕ್ರಮಿಸಲು ಆದೇಶಿಸಿದೆ ಹಾಗೂ ಈ ಕೆಳಕಂಡ ದರಗಳನ್ನು ವಿಧಿಸಿ ಸಕ್ರಮಗೊಳಿಸಲು ಆದೇಶಿಸಿದೆ.

ಪ್ರದೇಶ	ಪ್ರಸ್ತುತ ಮಾರುಕಟ್ಟೆ	ಪ್ರತಿ ಚ. ಮೀಟರ್‌ಗೆ
ಮಲ್ಪೆ ಕೊಡವಾರು	ರೂ.32 ಚ.ಮಿ.	ರೂ.2-00 ಚ.ಮಿ. 30 x 40 ಅಡಿ ನಿವೇಶನಕ್ಕೆ ರೂ.5-00 ಚ.ಮಿ. 40 x 60 ಅಡಿ ನಿವೇಶನಕ್ಕೆ ರೂ.10-00 ಚ.ಮಿ. 30 x 40 ಅಡಿ ಅಳತೆಗೆ ಮೇಲ್ಪಟ್ಟು

ಸ್ಥಳ ಮೌಲ್ಯದೊಂದಿಗೆ, ಮೋಜಣಿ ಶುಲ್ಕ ಪರಿವರ್ತನ ನಿವೇಶನಕ್ಕೆ ಅಂದಾಜು 738.00 ರೂ.ಗಳಾಗುತ್ತಿದ್ದು, (ಅಂದರೆ ಮಾರುಕಟ್ಟೆ ಬೆಲೆ ಇತರೆ ಶುಲ್ಕ), ಅಂದರೆ 1994 ರನ್ವಯ ವಿಧಿಸಿದ್ದ ಶುಲ್ಕವನ್ನು ಚದರ ಮೀಟರ್ ಅನುಸಾರವಾಗಿ ಪಾವತಿಸಿಕೊಳ್ಳಲು ಹಾಗೂ ಅಂದಿನ ಪರಿವರ್ತನಾ ಶುಲ್ಕ ವಿಧಿಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಕೇವಲ ಬೆಲೆ ವಿಧಿಸಿರುವುದರಲ್ಲಿ, ವ್ಯತ್ಯಾಸವಾಗಿದ್ದು, ಈಗ ಸರ್ಕಾರಿ ಆದೇಶದನ್ವಯ ದಿನಾಂಕ: 29-9-94ರಲ್ಲಿ ಜಾರಿಯಲ್ಲಿದ್ದ ಪರಿವರ್ತನೆ ಮತ್ತು ದಂಡನಾ ಮೌಲ್ಯವನ್ನು ನಿಗಧಿಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದೆ.

3) ಉಡುಪಿ ತಾಲ್ಲೂಕು ಅಲೆವೂರು, 80 ಬಡಗಬೆಟ್ಟು ಮತ್ತು ಶಿವಳ್ಳಿ ಪ್ರದೇಶದ 1392 ನಿವೇಶನದಾರರಿಗೆ ಹಕ್ಕು ಪತ್ರ ನೀಡುವ ಬಗ್ಗೆ.

ಉಡುಪಿ ತಾಲ್ಲೂಕು ಅಲೆವೂರು, 80 ಬಡಗಬೆಟ್ಟು ಮತ್ತು ಶಿವಳ್ಳಿ ಪ್ರದೇಶದ 1392 ನಿವೇಶನದಾರರಿಗೆ ನೀಡಿದ್ದ ಹಕ್ಕುಪತ್ರ ರದ್ದುಪಡಿಸಿರುವ ಬಗ್ಗೆ ಕುಂದಾಪುರದ ಉಪವಿಭಾಗಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನೇಮಿಸಲಾಗಿದ್ದ ಸಮಿತಿಯ ವರದಿಯಂತೆ

1275 ಪ್ರಕರಣಗಳಲ್ಲಿ ರದ್ದುಪಡಿಸಲಾಗಿದೆ (ಪರತ್ತು ಉಲ್ಲಂಘನೆಯಾಗಿದ್ದು) ಹಾಗೂ 117 ಜನರಿಗೆ ಹಕ್ಕು ಪತ್ರಗಳನ್ನು ನೀಡಲು ಸಮಿತಿಯು ಶಿಫಾರಸ್ಸು ಮಾಡಿದೆ. ಜಿಲ್ಲಾ ಅರಣ್ಯ ಇಲಾಖೆಯು ಶಿಫಾರಸ್ಸು ಮಾಡಿದೆ. ಜಿಲ್ಲಾ ಅರಣ್ಯ ಇಲಾಖೆಯು ಸದರಿ ಜಮೀನಿನ ಬಗ್ಗೆ ಅಧಿಸೂಚನೆ ಹೊರಡಿಸಿದ್ದು, ಈ ಬಗ್ಗೆ ಜಮೀನನ್ನು ಬಿಡುಗಡೆ ಮಾಡಿ ಕಂದಾಯ ಇಲಾಖೆಯ ವಶಕ್ಕೆ ನೀಡಲು ಅರಣ್ಯ ಇಲಾಖೆಯು ಒಪ್ಪಿದ್ದು, ಡಿ. ನೋಟಿಫಿಕೇಷನ್ ಸಲುವಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಇದಕ್ಕೆ ಬದಲು ಬೇರೆ ಜಮೀನನ್ನು ಅರಣ್ಯ ಇಲಾಖೆಗೆ ನೀಡಲು ಕಂದಾಯ ಇಲಾಖೆಯು ಒಪ್ಪಿರುತ್ತದೆ. ಈ ಬಗ್ಗೆ ಅರಣ್ಯ ಇಲಾಖೆಯ ಪ್ರಸ್ತಾವನೆ ಬಗ್ಗೆ ಅನುಮೋದನೆ ದೊರಕಿದಲ್ಲಿ ಕೂಡಲೇ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

5.10 ಪಿ.ಎಂ.

+ಶ್ರೀ ಯು.ಆರ್. ಸಭಾಪತಿ :— ಮಾನ್ಯ ಚೇರ್ಮನ್‌ರವರೆ, ಇವರು ಕೊಟ್ಟಿರುವಂತಹ ಹೇಳಿಕೆ ಸಂಪೂರ್ಣ ಪೂರ್ವಾಗ್ರಹ ಪೀಡಿತವಾದಂತಹ ಹಾಗೂ ಸಂಪೂರ್ಣವಾಗಿ ಸುಳ್ಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಇವರಿಗೆ ಬೇಜವಾಬ್ದಾರಿ ಇದೆ ಎಂದರೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗೆ ತಿಳಿಸಲಾಗಿದೆ. ಎಂದು ಹೇಳಿದ್ದಾರೆ. ನಮ್ಮ ಉಡುಪಿ ಜಿಲ್ಲೆ ಎಂದು ಆಗಿ ಎರಡು ವರ್ಷಗಳಾಗಿವೆ. ಇನ್ನು ಕೂಡ 'ದಕ್ಷಿಣ ಕನ್ನಡ ಜಿಲ್ಲಾಧಿಕಾರಿ' ಎಂದರೆ ಏನು? ಇದು ಹೇಗೆ?

ಶ್ರೀ ಬಿ. ಸೋಮಶೇಖರ್ :— ಅದು ತಪ್ಪಾಗಿದೆ, ಬದಲಾವಣೆಯಾಗಬೇಕು, ಅದು ಉಡುಪಿ ಜಿಲ್ಲೆ ಎಂದು ಬರಬೇಕು.

ಶ್ರೀ ಯು.ಆರ್. ಸಭಾಪತಿ :— ಅದು ಉಡುಪಿ ಜಿಲ್ಲೆಯಾಗಿದೆ ಎಂಬುದು ನಿಮ್ಮ ಅಧಿಕಾರಿಗಳಿಗೆ ಗೊತ್ತಿಲ್ಲವೇ? ಇನ್ನು ಎಲ್ಲದಕ್ಕಿಂತಲೂ ದೊಡ್ಡ ಮೋಸವೆಂದರೆ, ನಾನು ಇಲ್ಲಿಯವರೆಗಿನ ಎಂಟು ಅಧಿವೇಶನಗಳಲ್ಲಿ ಎಂಟು ಸಲವೂ ಈ ವಿಷಯ ಪ್ರಸ್ತಾವನೆ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಎರಡು ಸಲ ದಕ್ಷಿಣ ಕನ್ನಡ ಜಿಲ್ಲೆಗೂ ಬಂದಿದ್ದರು. ಉಡುಪಿ ಜಿಲ್ಲೆ ರಿವ್ಯೂ ಆಗಿದೆ, ರಿವ್ಯೂ ಆದಮೇಲೆ ದಂಡನಾ ಮೌಲ್ಯವನ್ನು ರದ್ದು ಮಾಡುತ್ತೇವೆಂದು ಅಲ್ಲಿ ಹೇಳಿಕೆಯನ್ನು ಕೊಟ್ಟರು ಮತ್ತೆ ಈ ಸದನದಲ್ಲೂ ಮಾನ್ಯ ಎಂ.ಪಿ. ನಾಣಯ್ಯನವರು ಹೇಳಿದರು. ನಾನು ಎರಡು ಸಲ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಧರಣಿ ಮಾಡಿದೆ, ಸದನದಲ್ಲೂ ಧರಣಿ ಮಾಡಿದೆ, ಇಷ್ಟಾದರೂ ಇವರು ಪುನಃ ಹೇಳಿಕೆಯಲ್ಲಿ ಆ ರೀತಿ ಕೊಟ್ಟಿದ್ದಾರೆ, ತಾವು ಓದಿ ನೋಡಿ. ಉಡುಪಿ ತಾಲ್ಲೂಕಿನ ಪುತ್ತೂರು, ಹೆರ್ಗ ಶಿವಳ್ಳಿ, ಬೈಲೂರು ಮತ್ತು ಮಲ್ಪೆ ಪ್ರದೇಶಗಳಿಗೆ ಸಂಬಂಧಿಸಿದಂತೆ ಅನಧಿಕೃತ ಸಾಗುವಳಿದಾರರನ್ನು ಸಕ್ರಮಗೊಳಿಸಲು ನಿಯಮಗಳಲ್ಲಿ ಅವಕಾಶ ಇಲ್ಲ ಎಂದು ಹೇಳಿಕೆ ನೀಡಿದ್ದಾರೆ. ಇವರು 25 ವರ್ಷಗಳಿಂದಲೂ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ,

1990ನೇ ಇಸವಿಗೆ ಅದು ಗ್ರಾಮಪಂಚಾಯತ್ ಆಗಿತ್ತು, ಉಡುಪಿ ಪುರಸಭೆಯಾಗಿತ್ತು. ಇವರು ಮೆನ್‌ಷನ್ ಮಾಡಿರುವಂಥಾದ್ದು ಮಹಾನಗರ ಮತ್ತು ನಗರಸಭೆ ವ್ಯಾಪ್ತಿಯಲ್ಲಿನ 5 ಕಿ.ಮಿ. ಒಳಗಿನ ಪ್ರದೇಶವೆಂದು ಹೇಳುತ್ತಾರೆ. ನಮ್ಮದು ಮೂವತ್ತೇರಡು ಸಾವಿರ ಜನಸಂಖ್ಯೆಯ ಪುರಸಭೆ ಎನ್ನುವುದು ಮಾಡುವವರಿಗೆ ಗೊತ್ತಿರಲಿಲ್ಲವೇ? ನಾವು 1990ನೇ ಇಸವಿಯವರೆಗೆ ಎಲ್ಲಾ ಕಡತಗಳನ್ನು ಇವರಿಗೆ ಕೊಟ್ಟಿದ್ದೇವೆ. ಅದು ಉತ್ತರದಲ್ಲಿ ಪುರಸಭೆಯಾಗಿತ್ತು, ಈ ಪುರಸಭೆ ವ್ಯಾಪ್ತಿಯಲ್ಲಿ 1990ನೇ ಇಸವಿಗಿಂತ ಮೊದಲು 25 ವರ್ಷಗಳಿಂದಲೂ ಇರುವವರು ಅರ್ಜಿಯನ್ನು ಹಾಕಿದ್ದಾರೆ. ಅವರು ಅರ್ಜಿ ನಮೂನೆ 50 ರಲ್ಲಿ ಅರ್ಜಿ ಕೊಟ್ಟಿದ್ದಾರೆ, ಅದರ ಬಗ್ಗೆ ಸಾಕಷ್ಟು ಡಿಸ್‌ಕಷನ್ ಆಗಿದೆ, ಇದೆಲ್ಲಾ ಆಗಿ ಪುನಃ ಇದನ್ನೇ ಹೇಳುತ್ತಿದ್ದಾರೆಂದರೆ ಇದರಲ್ಲಿ ಏನು ಅರ್ಥವಿದೆ? ಇದರ ಬಗ್ಗೆ ಯಾರನ್ನು ಕೇಳಬೇಕು, ಇದು ಅವರು ಕೊಟ್ಟಿರುವಂತಹ ಮೊದಲನೆಯ ಹೇಳಿಕೆಯಾಗಿದೆ. ಇನ್ನು ಎರಡನೆಯದರಲ್ಲಿ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 12 ಎಲ್‌ಜಿಎ 91, ದಿನಾಂಕ : 29-9-94 ಎಂದು ಮಲ್ಪೆ, ಕೊಡವೂರು, ಬೆಂಗ್ರೆ ಎಂದರೆ ಇದು ಮಂಗಳೂರ ಬೆಂಗ್ರೆ ಎಂದು ಹೇಳಿ ಅನಧಿಕೃತವೆಂದು ಒಂದೇ ಆದೇಶದಲ್ಲಿ ಈ ಮೂರು ಪ್ರದೇಶಗಳಲ್ಲಿ 2041 ಜನರಿಗೆ ಸಕ್ರಮಗೊಳಿಸಲು ಆದೇಶಿಸಲಾಗಿದೆ. ಇದು ಈ ಸಲವಾಗಿದೆ. ಆದರೆ ಈ ಆದೇಶದ ಪ್ರಕಾರ ಮಂಗಳೂರಿನ ಉಳ್ಳಾಲ ಬೆಂಗ್ರೆ ಮತ್ತು ಗಂಗೋಳ್ಳಿಯ ಭೂ ರಹಿತ ಬಡವರಿಗೆ ಯಾವ ರೀತಿಯ ದಂಡನಾಮೌಲ್ಯ ಎಂದರೆ ಒಂದು ರೂಪಾಯಿ ಚಾರ್ಜ್ ಮಾಡಿದ್ದಾರೆ. ಈ ರೀತಿಯಲ್ಲಿ ಅವರಿಗೆ ಹಕ್ಕುಪತ್ರಗಳನ್ನು ಕೊಟ್ಟು ಆಗಿದೆ. ಅದೇ ರೀತಿಯಲ್ಲಿ ಇಲ್ಲೂ ಕೊಡಬೇಕೆಂದು ಸರ್ಕಾರದ ಆದೇಶವಿರುವಾಗ ಇವರಿಗೆ ಹಕ್ಕುಪತ್ರವನ್ನು ಕೊಟ್ಟು ಆಗಿದೆ. ಅದೇ ರೀತಿಯಲ್ಲಿ ಇಲ್ಲಿರುವಾಗ ಪುನಃ ಇವರು ದಂಡನಾ ಮೌಲ್ಯವೆಂದು ಹೇಳುತ್ತಿದ್ದರಲ್ಲಾ, ಇದಕ್ಕೆ ನಾವು ಏನು ಹೇಳಬೇಕು? ಗಂಗೊಳ್ಳಿಗೆ ಒಂದು ಕಾನೂನು, ಉಳ್ಳಾಲಕ್ಕೆ ಒಂದು ಕಾನೂನು, ಉಡುಪಿಗೆ ಒಂದು ಕಾನೂನು ಎಂದರೆ ಹೇಗೆ? ನಾನು ಇಲ್ಲಿಯತನಕ ಎಂಟು ಅಧಿವೇಶನಗಳು ನಡೆದಾಗಲೂ ಇದನ್ನು ಪ್ರಸ್ತಾಪ ಮಾಡಿದ್ದೇನೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಒಂದೇ ಆದೇಶದಲ್ಲಿ ಲ್ಯಾಂಡ್‌ಲೆಸ್ ಬಡವರಿಗೆ ಕೊಡುವಂಥಾದ್ದು ಏನಿದೆ ಇದಕ್ಕೆ ಮಾರ್ಕೆಟ್ ದರವನ್ನು ವಿಧಿಸುವುದಕ್ಕಾಗುವುದಿಲ್ಲ, ಇದಕ್ಕೆ ದಂಡನಾ ಮೌಲ್ಯವನ್ನು ಹಾಕುವುದಕ್ಕೂ ಬರುವುದಿಲ್ಲ, ಪರಿವರ್ತನಾ ಮೌಲ್ಯವನ್ನೂ ಸಹ ಹಾಕುವುದಕ್ಕಾಗುವುದಿಲ್ಲ. ನಾವು ಇದನ್ನೇ ಮತ್ತೆ ಮತ್ತೆ ಹೇಳಿದರೂ ಇವರು ಮತ್ತೆ ಹಿಂದಕ್ಕೆ ವಾಪಸ್ಸು ತಂದು ದಂಡನಾ ಮೌಲ್ಯ, ಮಾರ್ಕೆಟ್ ದರ ಎಂದು ಎಲ್ಲವನ್ನು ನಾವು ಚಾರ್ಜ್ ಮಾಡುತ್ತೇವೆಂದು ಹೇಳುತ್ತಾರೆ. ಇದನ್ನು ನಾವು ಊರಿನ ಕತೆ ಎಂದು ಹೇಳುವುದಾ? ಅಥವಾ ಇವರು ಪರಿಹಾರ, ಇತ್ಯರ್ಥ ಮಾಡಬೇಕೆಂದು ಏನು ಇಲ್ಲವೇ? ನಾವು ಏನೆಂದು ಹೇಳಬೇಕು? ಇನ್ನು ಮೂರನೆಯ ಹೇಳಿಕೆಯಲ್ಲಿ ಅಲೆವೂರು, 80 ಬಡಗಬೆಟ್ಟು ಮತ್ತು ಶಿವಳ್ಳಿ

ಪ್ರದೇಶದ 1392 ನಿವೇಶನದಾರರಲ್ಲಿ 117 ಜನರಿಗೆ ಹಕ್ಕು ಪತ್ರಗಳನ್ನು ಕೊಟ್ಟಿರುತ್ತಾರೆಂದು ಹೇಳಿದ್ದಾರೆ. ಇದು ಯಾವುದೆಂದರೆ 10-12 ವರ್ಷಗಳ ಹಿಂದೆ ಕೊಟ್ಟಿರುವಂತಹ ಹಕ್ಕುಪತ್ರಗಳಾಗಿವೆ. ಅಲ್ಲಿ ಏನಾಗಿದೆ ಎಂದರೆ ಈ 177 ಮಂದಿಗೆ ಕಂದಾಯ ಇಲಾಖೆಯವರು ಕೊಟ್ಟಿರುವಂತಹ ಹಕ್ಕುಪತ್ರಗಳ ಜಾಗದಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಶುರು ಮಾಡಿದ್ದಾರೆ. ಆ ವೇಳೆಗೆ ಅರಣ್ಯ ಇಲಾಖೆಯವರು ಬಂದು ಗಲಾಟೆ ಮಾಡಿ ಇದು ನಮ್ಮ ಇಲಾಖೆಗೆ ಸೇರಿದ ಜಮೀನು ಎಂದು ಹೇಳಿದರು. ಆ ಜಮೀನು ಅಲ್ಲಿಯವರಿಗೂ ಇವರಿಗೆ ಆಗಿರಲಿಲ್ಲ. ಆದರೂ ಅವರು ಬಂದು ನಮ್ಮ ಜಮೀನು ಎಂದು ಗಲಾಟೆ ಮಾಡಿದರು. ಆಗ ಇವರು ಏಕಾಏಕಿ ಎಲ್ಲಾ ಹಕ್ಕು ಪತ್ರಗಳನ್ನು ರದ್ದು ಮಾಡಿದರು. ಇವರು ಮತ್ತೆ ಹೇಳಿಕೆಯಲ್ಲಿ 1275 ಪ್ರಕರಣಗಳಲ್ಲಿ ಹಕ್ಕುಪತ್ರಗಳನ್ನು ಕೊಡುವುದನ್ನು ರದ್ದುಪಡಿಸಲಾಗಿದೆ ಎಂದು ಹೇಳಿದ್ದಾರೆ. ಯಾವಾಗ ಫಲಾನುಭವಿಗಳು ಆ ಪ್ರದೇಶಕ್ಕೆ ಹೋಗಿ ಮನೆಗಳನ್ನು ಕಟ್ಟುವುದಕ್ಕೆ ತೊಡಗಿದರೋ ಆಗ ಅರಣ್ಯ ಇಲಾಖೆಯವರು ಬಂದು ಅದನ್ನು ತಡೆದ ಮೇಲೆ ಅಲ್ಲಿ ವಾಸಕ್ಕೆ ಯಾರೂ ಹೋಗಲಿಲ್ಲ. ಆಗ ಸರ್ಕಾರದಿಂದಲೂ ತಡೆಯಾಜ್ಞೆ ಬಂತು, ಅಲ್ಲಿಗೆ ಯಾರು ಹೋಗುವುದು ಬೇಡವೆಂದು ತಿಳಿಸಿದರು. ಅದು ಅರಣ್ಯ ಇಲಾಖೆಯವರೊಂದಿಗೆ ಇತ್ಯರ್ಥವಾಗಬೇಕೆಂದು ಹೇಳಿದರು. ತಾವು 1275 ಪ್ರಕರಣಗಳಲ್ಲಿ ಷರತ್ತುಗಳು ಉಲ್ಲಂಘನೆಯಾಗಿದೆ ಎಂದು ಹೇಗೆ ರದ್ದು ಮಾಡಿಸಿದ್ದೀರಿ? ತಾವು 44 ಜನ ಪತ್ರಕರ್ತರುಗಳ ಹತ್ತಿರ ಹೇಳಿದಂತೆ ಸ್ಥಳ ಮೌಲ್ಯವೆಂದು ಬರೆದುಕೊಂಡಿದ್ದಾರೆ. ಆ ಸ್ಥಳ ಮೌಲ್ಯವನ್ನು ಪಡೆದುಕೊಂಡದ್ದು ಈ ಫಲಾನುಭವಿಗಳ ಪಟ್ಟಿಯಲ್ಲಿದೆ. ಈ ಸ್ಥಳ ಮೌಲ್ಯವನ್ನು ಪಡೆದುಕೊಂಡು ಅವರಿಗೆ ಹಕ್ಕುಪತ್ರವನ್ನು ಕೊಡುತ್ತೇವೆಂದು ಪತ್ರಕರ್ತರುಗಳಿಗೆ ಹೇಳಿದ್ದೀರಿ. ನೀವು ಇದನ್ನು ಯಾವ ಆಧಾರದ ಮೇಲೆ ರದ್ದು ಮಾಡಿದ್ದೀರಿ. ನೀವು ರದ್ದು ಮಾಡಿದ ಮೇಲೆ ದಂಡನಾಮೌಲ್ಯವನ್ನು ತೆಗೆದುಕೊಂಡ ಮೇಲೆ ಅವರಿಗೆ ವಾಪಸ್ಸು ಕೊಡಬೇಕಲ್ಲವೇ? ಅದನ್ನು ನೀವು ಕೊಡಲಿಲ್ಲ, ಇದನ್ನು ಮಾಡಲಿಲ್ಲ, ಇಲ್ಲಿ ನೀವು ಸುಳ್ಳು ಹೇಳಿಕೆ ಕೊಡುತ್ತಿದ್ದೀರಿ. ಇದಕ್ಕೆ ಏನು ಅರ್ಥವಿದೆ, ನನಗೆ ನ್ಯಾಯ ಬೇಕು, ಇವರು ಮತ್ತೆ ಮತ್ತೆ ಚರ್ವಿತಾ-ಚರ್ವಣಾ ಮಾಡಿ ಹಾದಿ ತಪ್ಪಿಸುವಂತಹ ಸುಳ್ಳು, ಸಾರಿಕೆ ಉತ್ತರ ಕೊಡುವುದು ನನಗೆ ಬೇಡ. ನನಗೆ ಸಂಪೂರ್ಣವಾದಂತಹ ನ್ಯಾಯ ಸಿಗಲಿಲ್ಲವೆಂದರೆ ನಾನು ಬಿಡುವುದಿಲ್ಲ, ನಾನು ಧರಣಿ ಮಾಡುತ್ತೇನೆ.

ಅಧ್ಯಕ್ಷರು :— ಮಾನ್ಯ ಸಭಾಪತಿಯವರೆ, ತಾವು ಧರಣಿ ಮಾಡುವುದು ಬೇಡ. ತಾವು ಪ್ರಸ್ತಾಪ ಮಾಡಿರುವಂತಹ ವಿಷಯ ಏನೆಂಬುದನ್ನು ನಾನು ಕೇಳಿಸಿಕೊಂಡಿಲ್ಲ. ನೀವು ಧರಣಿಗೆ ಬಂದು ಬಿಟ್ಟರೆ ಹೇಗೆ?

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಸಂಪೂರ್ಣವಾಗಿ ಸುಳ್ಳು ಹೇಳಿಕೆಯಾಗಿದೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನು ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ಅದರಲ್ಲಿ ಏನಾದರೂ ಭಿನ್ನಾಭಿಪ್ರಾಯಗಳು ಇದ್ದರೆ, ಮಾನ್ಯ ಸದಸ್ಯರು ಪ್ರತ್ಯೇಕವಾಗಿ ನನ್ನ ಹತ್ತಿ ಬಂದರೂ ನಾನು ಅವರಲ್ಲಿ ಮಾತನಾಡುತ್ತೇನೆ. ಅದಕ್ಕೆ ಅವರು ಹೇಳಿಕೆಯನ್ನು ಹಾಗೆ ಕೊಡಬೇಕು, ಹೀಗೆ ಕೊಡಬೇಕು, ಇಲ್ಲದಿದ್ದರೆ ನಾನು ಸಭೆಯನ್ನು ನಡೆಸುವುದಕ್ಕೆ ಆಗುವುದಿಲ್ಲ, ಧರಣಿ ಮಾಡುತ್ತೇನೆಂದರೆ ತಾವೇ ಯೋಚನೆ ಮಾಡಿ ಯಾವ ನಿಯಮದಡಿಯಲ್ಲಿ ಈ ರೀತಿ ಮಾಡುವುದಕ್ಕೆ ಬರುತ್ತದೆ?

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೆ, ಇಲ್ಲಿ 8 ಅಧಿವೇಶನಗಳು ನಡೆದಿದ್ದು ನಾನು 8ನೇ ಬಾರಿ ಈ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇವರು ಹೇಳಿಕೆಯನ್ನು ಹಾಗೆ ಹೀಗೆ ಕೊಡುವುದು ಬೇಡ; ಇವರು ಎಂಟು ಸಲವೂ ಸುಳ್ಳು ಹೇಳಿದ್ದಾರೆ; ಈಗಲೂ ಮತ್ತೊಮ್ಮೆ ಸುಳ್ಳು ಹೇಳಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಅವರು ಯಾವ ನಿಯಮದಡಿಯಲ್ಲಿ ಮಾಡಬೇಕೆಂಬುದನ್ನು ನೀವೇ ಹೇಳಿ.

ಅಧ್ಯಕ್ಷರು :— ಮಾನ್ಯ ಯು.ಆರ್. ಸಭಾಪತಿಯವರೆ, ವಿಚಾರ ಏನೆಂದು ಹೇಳಿ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೆ, ನಾನು ವಿಷಯ ಏನೆಂಬುದನ್ನು ಮತ್ತೊಮ್ಮೆ ಹೇಳುತ್ತೇನೆ.

ಅಧ್ಯಕ್ಷರು :— ಮನುಷ್ಯ ಭಾವೋದ್ವೇಗಕ್ಕೆ ಒಳಗಾದಾಗ ವಿಚಾರ ಹಿಂದಕ್ಕೆ ಹೋಗುತ್ತದೆ, ವಿಚಾರ ಮುಂದಾಗಬೇಕು, ಭಾವೊದ್ವೇಗ ಕಡಿಮೆಯಾಗಬೇಕು. ತಾವು ಸಾಕ್ಷಾತ್ ಉಡುಪಿ ಕೃಷ್ಣನಂಥವರು ಅಷ್ಟು ತಾಳ್ಮೆಯುಳ್ಳವರು, ಇಷ್ಟು ಭಾವೊದ್ವೇಗಕ್ಕೆ ಏಕೆ ಒಳಗಾಗುತ್ತೀರಿ? ತಾವು ವಿಚಾರ ಏನೆಂಬುದನ್ನು ಹೇಳಿ.

ಶ್ರೀ ಯು.ಆರ್. ಸಭಾಪತಿ :— ಮೊನ್ನೆ ಆ ಜಿಲ್ಲಾಧಿಕಾರಿ ಸುಳ್ಳು ಹೇಳಿಕೆಯನ್ನು ಕೊಟ್ಟಿದ್ದನ್ನು ಮಾನ್ಯ ಸಚಿವರು ಹೇಳಿದರು, ಆ ಜಿಲ್ಲಾಧಿಕಾರಿಯು ಹೇಳಿದ್ದನ್ನೆ ಈಗ ಪುನಃ ಹೇಳುತ್ತಿದ್ದಾರೆ. ನಾನೇನು ಮಾಡಲಿ? ನನ್ನ ಉಡುಪಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೂರು ಸಾವಿರ ಜನರಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡುವ ಬಗ್ಗೆ ಇದು ಸಂಬಂಧಿಸಿದ್ದಾಗಿದೆ. 1994 ಡಿಸೆಂಬರ್ 26 ರಂದು ಮಾನ್ಯ ವಿರೋಧಪಕ್ಷದ ನಾಯಕರಾಗಿ ನಮ್ಮ ಯಡಿಯೂರಪ್ಪನವರು ಇದ್ದರು, ಅವರು ಆ ದಿವಸ ಎತ್ತಿದಂತಹ ವಿಚಾರ ಇದು. ಅಲ್ಲಿಂದ ಆರಂಭವಾಗಿ ಪ್ರತಿ ಅಧಿವೇಶನದಲ್ಲೂ ಇಲ್ಲಿಯವರೆಗೆ ಈ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪಿಸುತ್ತಾ ಬಂದಿದ್ದೇನೆ. ಇವತ್ತು ಉತ್ತರ ಕೊಡುವಾಗ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ ಎಂದು ಉತ್ತರ

ಕೊಟ್ಟಿದ್ದಾರೆ; ನಮ್ಮ ಜಿಲ್ಲೆಯಾಗಿ ಎರಡು ವರ್ಷವಾಗಿದೆ ಮತ್ತೆ ದಕ್ಷಿಣ ಕನ್ನಡ ಜಿಲ್ಲೆ ಎಂದು ಉತ್ತರದಲ್ಲಿ ಹೇಳುತ್ತಿದ್ದಾರೆ. ಇವರು ಹೇಳಿರಬಹುದು ಇರಲಿ ಆದರೆ ಸಂಬಂಧಪಟ್ಟ ಅಧಿಕಾರಿಗಳು ಹಾಗೆ ತಪ್ಪು ಮಾಡುವುದಕ್ಕಾಗುತ್ತದೆಯೆ? ಮತ್ತೆ ಉಡುಪಿ ತಾಲ್ಲೂಕಿನ ಪುತ್ತೂರು, ಶಿವಳ್ಳಿ, ಬೈಲೂರು, ಅಳಿಕೆ ಮತ್ತು ಮಲ್ಪೆ ಪ್ರದೇಶಗಳಿಗೆ ಸಂಬಂಧಿಸಿದಂತೆ ಅಧಿಕೃತ ಸಾಗುವಳಿದಾರರಿಗೆ ಸಾಗುವಳಿಯನ್ನು ಸಕ್ರಮಗೊಳಿಸುವ ಕುರಿತು ಒಟ್ಟು 1425 ಅರ್ಜಿಗಳು ಬಂದಿವೆ. ಇವು 1990ನೇ ಇಸವಿಗಿಂತ ಪೂರ್ವವಾಗಿ ಸುಮಾರು 15-20 ವರ್ಷಗಳಿಂದ ಸರ್ಕಾರಿ ಜಮೀನಿನಲ್ಲಿದ್ದವರು ಅರ್ಜಿ ನಮೂನೆ 50 ರಲ್ಲಿ ಅಕ್ರಮ ಸಾಗುವಳಿ ಸಕ್ರಮಗೊಳಿಸುವ ಸಮಿತಿಗೆ ಹಾಕಿದಂತಹವು. 1993 ರಲ್ಲಿ ಈ ಬಗ್ಗೆ ಸರ್ಕಾರದ ಅಧಿಸೂಚನೆಯೊಂದು ಬಂತು. 1996ಕ್ಕೆ ನಗರಸಭೆಯಾಗಿ ಅದು ಪರಿವರ್ತನೆಗೊಂಡಿತು, 1993 ಕ್ಕೆ ನೋಟಿಫೈಡ್ ಏರಿಯಾ ಎಂದು ಅಧಿಸೂಚನೆ ಹೊರಡಿಸಿದರು. ಈ ಅಧಿಸೂಚನೆ ಬಂದ ತಕ್ಷಣ ಈ ಅಕ್ರಮ ಸಕ್ರಮ ಅರ್ಜಿಗಳು ಅಲ್ಲಿ ನೆನೆಗುದಿಗೆ ಬಿದ್ದವು. ನಾನು 1994 ರಲ್ಲಿ ಏನು ಹೇಳಿದೆ ಎಂದರೆ, ಇವು 1990ಕ್ಕಿಂತ ಮೊದಲಿನ ಅರ್ಜಿಗಳು ಇವನ್ನು ಅಲ್ಲಿ ಗ್ರಾಮಪಂಚಾಯಿತಿ ಇರುವಾಗಲೇ ಮಾಡಬೇಕಾಗಿತ್ತು, ಅದನ್ನು ನೀವು ಮಾಡಲಿಲ್ಲ; ಆ ಕಾಯಿದೆ ಪ್ರಕಾರ ನೀವು ಮಾಡಬೇಕೆಂದರೆ, ಅಂದಿನಿಂದ ಇಲ್ಲಿಯವರೆಗೆ ಈ ಕೆಲಸವನ್ನು ಮಾಡಲಿಲ್ಲ. ಮಹಾನಗರಪಾಲಿಕೆ ಮತ್ತು ನಗರಸಭೆಗಳ ವ್ಯಾಪ್ತಿಯಲ್ಲಿನ 5 ಕಿ.ಮಿ. ಒಳಗಿನ ಪ್ರದೇಶಗಳಲ್ಲಿನ ಅನಧಿಕೃತ ಸಾಗುವಳಿಯನ್ನು ಸಕ್ರಮ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಈ ಎಲ್ಲಾ ಗ್ರಾಮಗಳು 5 ಕಿ.ಮಿ. ವ್ಯಾಪ್ತಿಯೊಳಗೆ ಬರುತ್ತವೆ ಎಂದು ಈಗ ಹೇಳುತ್ತಾರೆ. ಆಮೇಲೆ 14-4-1994 ಕ್ಕಿಂತ ಮುಂಚೆ 50 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇದ್ದ ಪಕ್ಷದಲ್ಲಿ ಭೂಕಂದಾಯ ಅಧಿನಿಯಮ ತಿದ್ದುಪಡಿ ಕಾಯಿದೆ ಜಾರಿಗೆ ಬಂದ 3 ತಿಂಗಳೊಳಗೆ ಅಂತಹ ಜಮೀನನ್ನು ಸಕ್ರಮಗೊಳಿಸಲು ನಿಯಮಾವಳಿಯಂತೆ ಅವಕಾಶಗಳಿಲ್ಲವೆಂದು ಸಹ ಹೇಳುತ್ತಾರೆ.

ಅಧ್ಯಕ್ಷರು :— ಈಗ ನಿಮ್ಮ ಸಮಸ್ಯೆ ಅರ್ಥವಾಯಿತು; ಮಾನ್ಯ ಕಂದಾಯ ಮಂತ್ರಿಗಳು ಈ ಬಗ್ಗೆ ಏನು ಹೇಳುತ್ತಾರೊ ಕೇಳೋಣ.

ಶ್ರೀ ವಿ. ಸೋಮಶೇಖರ್ :— ಮಾನ್ಯ ಸಭಾಧ್ಯಕ್ಷರೆ, ಅನಧಿಕೃತ ಸಾಗುವಳಿದಾರರಿಗೆ ಸಾಗುವಳಿಯನ್ನು ಸಕ್ರಮಗೊಳಿಸಿಕೊಡುವ ಈ ಒಂದು ತಿದ್ದುಪಡಿಯನ್ನು ತಂದಾಗ ನಮ್ಮ ಸರ್ಕಾರದ ಉದ್ದೇಶದಂತೆ ಬೆಂಗಳೂರು ನಗರದಲ್ಲಿ ಅನಧಿಕೃತವಾಗಿ 20-25 ವರ್ಷಗಳಿಂದ ಜನರು ಸಾಗುವಳಿ ಮಾಡುತ್ತಿದ್ದಾರೆ, ಇದೇ ರೀತಿ ದೊಡ್ಡದೊಡ್ಡ ಪಟ್ಟಣಗಳಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಆದರಲ್ಲೂ ಬೆಂಗಳೂರು ನಗರದಲ್ಲಿ 18 ಕಿ.ಮಿ. ವ್ಯಾಪ್ತಿಯೊಳಗಡೆ ಮತ್ತು ಬೇರೆ ಬೇರೆ ನಗರಗಳಲ್ಲಿ ಏನೇನು ವ್ಯಾಪ್ತಿ ಇದೆ ಅದರೊಳಗೆ ಮಾಡಬೇಕೆಂದು ಇದನ್ನು ತಂದಿದ್ದು ಇದೆ. ಆವಾಗ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯಲ್ಲಿ ಚರ್ಚೆಗೆ

ತೆಗೆದುಕೊಂಡಾಗ, ಇದನ್ನು ಬಿಟ್ಟು ಮಾಡಬೇಕು, ಟೌನ್‌ನಲ್ಲಿ ಲ್ಯಾಂಡ್ ಮಾಫಿಯಾಗಳಾಗಿ ಇರತಕ್ಕಂಥವರು ಅದನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ ಎಂದು ಹೇಳಿದಾಗ ಆ ಉದ್ದೇಶದಿಂದ ಇದನ್ನು ತೆಗೆದು ಹಾಕಿದೆವು. ನಾವು ಕಾಯಿದೆಯಲ್ಲಿ ತಿದ್ದುಪಡಿಯನ್ನು ತರದೆ ನಗರ ಪ್ರದೇಶದೊಳಗಡೆ ಬರುವುದನ್ನು ಮಾಡುವುದಕ್ಕಾಗುವುದಿಲ್ಲ, ಅದಕ್ಕೆ ಕಾಯಿದೆಯಲ್ಲಿ ತಿದ್ದುಪಡಿಯನ್ನು ತರಬೇಕಾಗುತ್ತದೆ.

ಅಧ್ಯಕ್ಷರು :— ಒಂದು ಸಣ್ಣ ಸ್ಪಷ್ಟನೆ, ನಾನು ತಮಗೆ ಹೇಳುವುದಕ್ಕೆ ಇಚ್ಛಿಪಡುವುದೇನೆಂದರೆ, ಅನಧಿಕೃತವಾಗಿ ಯಾರು ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ, ಇದನ್ನೆಲ್ಲಾ ಸಕ್ರಮಗೊಳಿಸಬೇಕೆಂದು ಯಾವಾಗ ಸರ್ಕಾರ ನಿರ್ಧಾರ ಕೈಗೊಂಡಿದೆ ಅದಕ್ಕೆ ಮೊದಲೇ ಇವರು ನಗರ ವ್ಯಾಪ್ತಿಯೊಳಗೆ ಬರದಿದ್ದರೆ, prior to the date if they had already been cultivating and if these lands fall within the jurisdiction of the Corporation of Municipality they are not entitled. I think natural justice requires that they should also be given...

SRI. B. SOMASEKHAR :— Subsequently if the cultivators fall into the city limits, l;aw does not permit to claim exemption. We may have to amend the law.

ಅಧ್ಯಕ್ಷರು :— ದಯವಿಟ್ಟು ಕೇಳಿ, ಈ ಬಗ್ಗೆ ಅನೆಕ್ಸ್ ಮಾಡಿ ಕೆಲವು ಜಮೀನನ್ನು ಮುನಿಸಿಪಾಲಿಟಿ ಅಥವಾ ಕಾರ್ಪೋರೇಷನ್ ವ್ಯಾಪ್ತಿಗೆ ತರುವುದು ಅಥವಾ ಬಿಡುವುದು ಈ ಸರ್ಕಾರದ ಕೈಯಲ್ಲಿದೆ, ಜನರ ಕೈಯಲಿಲ್ಲ. ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸಿಕೊಡುತ್ತೇವೆಂದು ನಿರ್ಣಯ ತೆಗೆದುಕೊಂಡಿರುವುದು ಸರ್ಕಾರವೇ ತೆಗೆದುಕೊಂಡಿರುವ ಈ ನಿರ್ಣಯಕ್ಕೆ ಅನುಗುಣವಾಗಿ ಮಾಡಿದ ಘೋಷಣೆಯ ಹಿನ್ನೆಲೆಯಲ್ಲಿ ಅರ್ಜಿ ನಮೂನೆ 50 ರಲ್ಲಿ ಅವರು ಅರ್ಜಿಗಳನ್ನು ಸಲ್ಲಿಸಿದ್ದಾರೆ. ತದನಂತರ ಸರ್ಕಾರ ತನ್ನದೇ ಆದ ಕಾರಣಗಳಿಗೋಸ್ಕರ ಕೆಲವು ಹಳ್ಳಿಗಳನ್ನು ನಗರಸಭೆಯ ವ್ಯಾಪ್ತಿಯೊಳಗೆ ತರುತ್ತದೆ, ಅದಕ್ಕೆ ಅವರು ಕಾರಣರಲ್ಲ ಅಲ್ಲವೆ? ಯಾವ ದಿನಾಂಕದಲ್ಲಿ ಆ ಹಳ್ಳಿಗಳನ್ನೆಲ್ಲಾ ನಗರಸಭೆಯ ವ್ಯಾಪ್ತಿಯೊಳಗೆ ತಂದಿದ್ದೀರಿ, ಅದರ ನಂತರ ಯಾರಾದರೂ ನಾವು ಸಾಗುವಳಿ ಮಾಡುತ್ತಿದ್ದೇವೆ ಖಾಯಂ ಮಾಡಿಕೊಡಿ ಎಂದು ಕೇಳಿದರೆ ಅವರಿಗೆ ನಿಮ್ಮ ಅಧಿಸೂಚನೆ ಅನ್ವಯಿಸುತ್ತದೆ. ಆ ದಿನಾಂಕಕ್ಕಿಂತ ಹಿಂದಿದ್ದವರಿಗೆ I think they should be given exemption...

SRI B. SOMASEKAHR :— We will re-examine it. Government will be sympathetic to them. If it can be done by amending the law it will be done, I will be the first person to do it..

ಅಧ್ಯಕ್ಷರು :— ಆ ಬಡವರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶ ಮಾನ್ಯ ಮಂತ್ರಿಗಳದ್ದಲ್ಲ. He is very categorical in his expression. He is more to be sympathetic. Only thing is..on this particular issue he will get back to the Officers and he would tell us the mind of the Government, ಸ್ವಲ್ಪ ತಾಳ್ಮೆಯಿಂದ ಇರಿ, ನೀವು ಹೇಳಬೇಕಾದರೆ ಸ್ವಲ್ಪ ವಿವರಿಸಿ ಹೇಳಬೇಕು.

ಶ್ರೀ ಯು.ಆರ್. ಸಭಾಪತಿ :— ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 12 ಎಲ್‌ಜಿಎ 91, ದಿನಾಂಕ: 29-9-1994 ರಂದು ಮಲ್ಪೆ ಮತ್ತು ಕೊಡಗೂರು, ಉಳ್ಳಾಳ ಬೆಂಗ್ರೆ ಮತ್ತು ಕುಂದಾಪುರದ ಗಂಗೊಳ್ಳಿಗಳಲ್ಲಿ ಅನಧಿಕೃತವಾಗಿ ಜಮೀನನ್ನು ನಿವೇಶನವನ್ನಾಗಿ ಮಾಡುತ್ತಿರುವ ಒಟ್ಟು 2041 ಜನರಿಗೆ ಸಕ್ರಮಗೊಳಿಸಿಕೊಡಲು ಆದೇಶಿಸಲಾಗಿದೆ. ಈ ಒಂದೇ ಆದೇಶದಲ್ಲಿ ಮಂಗಳೂರಿನ ಉಳ್ಳಾಳಬೆಂಗ್ರೆ, ಉಡುಪಿಯ ಮಲ್ಪೆ ಕೊಡಗೂರು, ಕುಂದಾಪುರದ ಗಂಗೊಳ್ಳಿಯ 2041 ಜನರಿಗೆ ಹಕ್ಕುಪತ್ರ ಕೊಡಲು ಆದೇಶವಾಗಿದೆ. ಮಂಗಳೂರಿನ ಉಳ್ಳಾಬೆಂಗ್ರೆ ಮತ್ತು ಗಂಗೊಳ್ಳಿಯವರಿಗೆ ಜಮೀನಿಲ್ಲದ ಬಡವರೆಂದು ಒಂದು ರೂಪಾಯಿಯ ದಂಡನಾ ಮೌಲ್ಯವನ್ನು ವಿಧಿಸಿ ಅವರಿಗೆ ಹಕ್ಕುಪತ್ರವನ್ನು ಕೊಟ್ಟಿದ್ದಾರೆ. ಆದರೆ ಮಲ್ಪೆ ಮತ್ತು ಕೊಡಗೂರಿನವರಿಗೆ ಹದಿನೈದು, ಹತ್ತು, ಐದು ಸಾವಿರ ರೂಪಾಯಿಗಳಂತೆ ದಂಡನಾಮೌಲ್ಯವನ್ನು ವಿವರಿಸಿದರು. ಈ ರೀತಿ ಜಮೀನಿಲ್ಲದ ಬಡವರಿಗೆ ಗಂಗೊಳ್ಳಿಯಲ್ಲಿ ಒಂದು ಕಾನೂನು ಮಲ್ಪೆ ಮತ್ತು ಕೊಡಗೂರಿನಲ್ಲಿ ಮತ್ತೊಂದು ಕಾನೂನು ಹೇಗೆ ಜಾರಿಯಾಯಿತು ಎಂದು ನಾನು ಕೇಳುತ್ತಿದ್ದೇನೆ.

MR. SPEAKER :— Individual cases are different. Issue as a whole is different. ಉದಾಹರಣೆಗೆ ನಾಳೆ ನೀವೇ ಮಂತ್ರಿಯಾಗಿರುತ್ತೀರೆಂದು ತಿಳಿದುಕೊಳ್ಳಿ, ಕೆಳಗಿನ ಅಧಿಕಾರಿಗಳು ಏನು ಮಾಡಿ ಕಳುಹಿಸುತ್ತಾರೆ, ಅದೇ ಮೇಲಕ್ಕೆ ಬರುತ್ತದೆ. ಕೆಲವು ಸಲ ಅಲ್ಲಿರುವ ಕೆಲವು ಮಿಸ್‌ಚ್ಯುಮಸ್ ಜನರಿರಬಹುದು, ತಿಳಿವಳಿಕೆಯಿಲ್ಲದಿರುವವರಿರಬಹುದು.

ಶ್ರೀ ಯು.ಆರ್. ಸಭಾಪತಿ :— ಈ 348 ಜನರಿಗೆ ತಲಾ 15 ಸಾವಿರ ರೂಪಾಯಿಗಳಂತೆ ದಂಡನಮೌಲ್ಯವನ್ನು ಮೂರು ವರ್ಷದ ಹಿಂದೆ ಹಾಕಿದ್ದು, ಅದು ಅಧಿಕಾರಿಗಳ ತಪ್ಪಿನಿಂದಾದದ್ದು; ನಾವು ಅದನ್ನು ಉಸ್ತುವಾರಿ ಮಾನ್ಯ ಸಚಿವರ ಗಮನಕ್ಕೆ ತಂದೆವು. ಮಾನ್ಯ ಮುಖ್ಯಮಂತ್ರಿಗಳು ಮಂಗಳೂರು ಹಾಗೂ ಮಲ್ಪೆಗೆ ಬಂದಾಗ ಇದನ್ನು ಅವರ ಗಮನಕ್ಕೆ ತಂದಾಗ, ಅದಕ್ಕೆ ಅವರು ಇದು ಅಧಿಕಾರಿಗಳ ತಪ್ಪಿನಿಂದಾಗಿದೆ, ದಂಡನಾಮೌಲ್ಯವನ್ನು ರದ್ದುಮಾಡಿ ಹಕ್ಕುಪತ್ರಗಳನ್ನು ಕೊಡುತ್ತೇವೆಂದು ಹೇಳಿದರು; ಇದು ಎರಡು ವರ್ಷದ ಹಿಂದೆ ನಡೆದದ್ದು. ಆಮೇಲೆ ಎಲ್ಲಾ ಕೆಡಿಪಿ ಸಭೆಗಳಲ್ಲಿ, ಇಲ್ಲೂ ಕೂಡ ಮಾನ್ಯ ಕಾನೂನು ಸಚಿವರು ಆ ದಂಡನಾಮೌಲ್ಯವನ್ನು ರದ್ದುಪಡಿಸಿಕೊಡುತ್ತೇವೆ ಎಂದು ಒಪ್ಪಿಕೊಂಡರು, ಅದಕ್ಕೆ ನನ್ನಲ್ಲಿ ದಾಖಲೆ ಇದೆ. ಇದೆಲ್ಲಾ ಆದ ಮೇಲೆ ಪುನಃ ಪ್ರಸ್ತುತ ಮಾರುಕಟ್ಟೆ ಬೆಲೆ 32 ರೂಪಾಯಿ, ಪ್ರತಿ. ಚ.ಮಿ.ಗೆ ಸಮಂಜಸವಾದ ಬೆಲೆ ಎರಡು ರೂಪಾಯಿ ಪ್ರಕಾರ 30 x 40 ಅಡಿಗಳಿಗೆ ಮತ್ತು 5 ರೂಪಾಯಿಗಳ ಪ್ರಕಾರ 40 x 60 ಅಡಿಗಳಿಗೆ ಎಂದು ಹೇಳಿದರು.

ಅಧ್ಯಕ್ಷರು :— ನಾನು ಹೇಳುವುದನ್ನು ಕೇಳಿ, ಈ ವಿಚಾರದಲ್ಲಿ ಪೂರ್ಣ ವಿವರಕ್ಕೆ ಹೋಗಬೇಕಾದ ಅಗತ್ಯವಿಲ್ಲ. ಆಡಳಿತ ವ್ಯವಸ್ಥೆಯಲ್ಲಿ ಕೆಳಹಂತದಲ್ಲಿರುವ ಒಬ್ಬ ಗುಮಾಸ್ತನಿಂದ ಹಿಡಿದು ಇಲಾಖೆಯ ಕಾರ್ಯದರ್ಶಿಯವರೆಗೆ ಎಲ್ಲರೂ ಬರತಕ್ಕಂಥವರು. ಇದರಲ್ಲಿ ಒಬ್ಬರಿಗೆ ಕೂಡ ಈ ಬಡತನದ ಬಗ್ಗೆ ವಿರೋಧ ಮನೋಭಾವನೆ ಇರತಕ್ಕಂಥಾದ್ದಲ್ಲ. ಉತ್ತರ ಕೊಡಬೇಕಾದವರು ಮಾನ್ಯ ಮಂತ್ರಿಗಳು, ನಾನು ಈ ಬಗ್ಗೆ ವಿಚಾರ ಮಾಡುತ್ತೇನೆಂದು ಅವರೇ ಹೇಳಿದ್ದಾರೆ. ಅದಕ್ಕಿಂತ ಭರವಸೆ ಬೇಕೆ?

SRI. B. SOMASHEKAR :— We have open mind on this issue. If it can be done without amendment, Government will certainly help. ಆ ಬಗ್ಗೆ ನೀವು ಆವೇಶಪಡಬೇಕಾಗಿಲ್ಲ, ಮತ್ತೆ ನೀವು ನನ್ನ ಕಛೇರಿಗೆ ಬನ್ನಿ, ಅಧಿಕಾರಿಗಳನ್ನು ಕರೆಯಿಸುತ್ತೇನೆ, ಎಲ್ಲಿಲ್ಲಿ ಅವಕಾಶವಿದೆಯೋ ಅದೆಲ್ಲವನ್ನು ಮಾಡೋಣ.

ಶ್ರೀ ಯು.ಆರ್. ಸಭಾಪತಿ :— ಇದು ಈಗ ರೆಕಾರ್ಡಿಗೆ ಹೋಗುತ್ತಿದೆ, 8ನೇ ತಾರೀಖಿಗೆ ಅಲ್ಲಿ ಒಂದು ಸಭೆಯನ್ನು ಕರೆಯಲಿ.

ಶ್ರೀ ಬಿ. ಸೋಮಶೇಖರ್ :— ಇದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದು ಕೂಡ ರೆಕಾರ್ಡಿಗೆ ಹೋಗುತ್ತದೆ.

ಅಧ್ಯಕ್ಷರು :— ನನ್ನ ಮಾತನ್ನು ಕೇಳಿ, ನಿಮಗೆ ಇದು ರೆಕಾರ್ಡಿಗೆ ಹೋಗುವುದಕ್ಕಿಂತ ಇನ್ನು 2-3 ತಿಂಗಳಲ್ಲಿ ಚುನಾವಣೆ ಇದೆ, ಆ ಜನರಿಗೆ ಒಳ್ಳೆಯದಾಗಬೇಕು ನಿಮಗೆ ಒಳ್ಳೆಯ ಹೆಸರು ಬರಬೇಕು.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೇ, ಇವರನ್ನು ನಂಬಿಕೊಂಡು 5 ವರ್ಷಗಳಾಯಿತು, ಅಲ್ಲಿ ಜನರು ನಮ್ಮನ್ನು ಓಡಿಸುತ್ತಾರೆ.

ಶ್ರೀ ವಿ. ಸೋಮಶೇಖರ್ :— ಸಭಾಧ್ಯಕ್ಷರೆ, ನಾನು ಕಂದಾಯ ಮಂತ್ರಿಯಾದ ಮೇಲೆ ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದೇನೆ, ಇದುವರೆಗೆ ಏನು ಆಗಿರಲಿಲ್ಲ, ಇನ್ನು ಹೊಸದೇನಾದರು ಇದ್ದರೆ ಅದನ್ನು ಮಾಡೋಣ.

ಶ್ರೀ ಸಿ.ಆರ್ ಸಗೀರ್ ಅಹಮದ್ :— ಇದು ಉಡುಪಿಗೆ ಸೀಮಿತವಾಗಿ ಮಾತ್ರ ಆಗಬಾರದು, ಇದು ರಾಜ್ಯದ ಬೇರೆ ಪಟ್ಟಣಗಳಿಗೂ ಅನ್ವಯಿಸಬೇಕೆನ್ನುವುದು ನನ್ನ ಪ್ರಾರ್ಥನೆ.

ಶ್ರೀ ಯು.ಆರ್. ಸಭಾಪತಿ :— ಸಭಾಧ್ಯಕ್ಷರೇ, ಈ ವಿಚಾರದಲ್ಲಿ ನನಗೆ ಯಾವಾಗ ನ್ಯಾಯ ಸಿಗುತ್ತದೆ ಎಂಬುದನ್ನು ಹೇಳಿ. ಎಂಟನೇ ತಾರೀಖಿನೊಳಗೆ ಅವರು ಒಂದು ಮೀಟಿಂಗ್ ಕರೆಯಲಿ. ಮಾನ್ಯ ಸಿದ್ದರಾಮಯ್ಯನವರು ಉಡುಪಿಗೆ ಬಂದಿದ್ದಾಗ ಐದನೇ ತಾರೀಖು ಮೀಟಿಂಗ್ ಕರೆಯುತ್ತೇವೆ ಎಂದು ಹೇಳಿದ್ದರು.

ಅಧ್ಯಕ್ಷರು :— ಎಂಟನೇ ತಾರೀಖು ಅಲ್ಲ. ಮಾನ್ಯ ಮಂತ್ರಿಗಳು ಪದೇ ಪದೇ ಏನು ಹೇಳಿದ್ದಾರೆ ಆದರೆ ನಾನು ಮುಕ್ತ ಮನಸ್ಸಿನಿಂದ ಇದ್ದೇನೆ, ನೀವೂ ಬನ್ನಿ ಚರ್ಚೆ ಮಾಡೋಣ ಎಂದು ಹೇಳಿದ್ದಾರೆ. ಎಂಟನೇ ತಾರೀಖಿನ ಒಳಗಾಗಿ ಅವರು ಒಂದು ನಿರ್ಣಯವನ್ನು ತೆಗೆದುಕೊಂಡು ಇಲ್ಲಿ ಹೇಳುತ್ತಾರೆ. ಈ ಇಷ್ಯೂವನ್ನು ನಾನು ರೀಎಕ್ಸಾಮಿನ್ ಮಾಡುತ್ತೇನೆ ಎಂದು ಅವರು ಹೇಳಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೇ, ತಾವು ಒಂದು ನಿಮಿಷ ಮಾತನಾಡಲು ನನಗೆ ಅವಕಾಶವನ್ನು ಕೊಡಬೇಕು. ತಾವು ಎಲ್ಲಾ ವಿಚಾರವನ್ನು ಸರ್ಕಾರಕ್ಕೆ ಸರಿಯಾಗಿ ಹೇಳಿದಿರಿ. ನಾನು ಕೇಳುವಂಥಾದ್ದು ಏನೆಂದರೆ, ಈಗ ಸ್ವಲ್ಪ ಹೊತ್ತಿನ ಮುಂಚೆ ಮಾನ್ಯ ಕಾನೂನು ಸಚಿವರು, ಅರ್ಬನ್ ಲ್ಯಾಂಡ್ ಸೀಲಿಂಗ್ ಕಾನೂನಿನ ಬಗ್ಗೆ ಮಾತನಾಡಿದರು. ಅಧಿಕೃತವಾಗಿ ಜಮೀನು ಮಾಡಿರುವಂಥ ರೈತರು ಸರ್ಕಾರ ನಿಗದಿಪಡಿಸಿದಂಥ ಸಂದರ್ಭದಲ್ಲಿ ಅರ್ಜಿಗಳನ್ನು ಹಾಕಿದ್ದಾರೆ. ನಗರಸಭಾ ವ್ಯಾಪ್ತಿಯನ್ನು ನಿಗಧಿಪಡಿಸಿರುವಂಥಾದ್ದು ಅರ್ಜಿ ಕೊಟ್ಟಿರುವ ದಿನಾಂಕ ಬಿಟ್ಟು ಮೂರು ವರ್ಷಗಳ ನಂತರ. ಅರ್ಜಿ ಕೊಟ್ಟಿರುವಂಥಾದ್ದನ್ನು ತಾವು ಕಾನೂನುಬದ್ಧವಾಗಿ ತೀರ್ಮಾನ ಮಾಡಬೇಕಾಗುತ್ತದೆ. ಆದ್ದರಿಂದ ತಾವು ಅದನ್ನು ಕೇವಲ ಉಡುಪಿಗೆ ಮಾತ್ರವಲ್ಲ, ರಾಜ್ಯದ ಇತರ ಪುರಸಭಾ ಮತ್ತು ನಗರಸಭಾ ವ್ಯಾಪ್ತಿಯಲ್ಲಿ ಬರುವಂಥ ಜಮೀನುಗಳ ಬಗ್ಗೆಯೂ ತಾವು ಚಿಂತನೆ ಮಾಡಿ, ದಯವಿಟ್ಟು ಬಡವರಿಗೆ ಸಹಕಾರ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರವಾಗಿ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ :— ಈ ತೀರ್ಮಾನ ಉಡುಪಿ ಜಿಲ್ಲೆಯೊಂದಕ್ಕೇ ಸೀಮಿತವಾಗಿರುವುದಿಲ್ಲ. ಇಂಥ ಪ್ರಕರಣಗಳು ಬೇರೆ ಪ್ರದೇಶಗಳಲ್ಲಿದ್ದರೂ, ಅವೆಲ್ಲಕ್ಕೂ ಅನ್ವಯವಾಗುವಂತೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು :— ಈಗ ಕಾಮ್ರೇಡ್ ಶ್ರೀರಾಮರೆಡ್ಡಿಯವರು ಬೇಡಿಕೆಗಳ ಮೇಲೆ ತಮ್ಮ ಭಾಷಣ ಪ್ರಾರಂಭಿಸಬೇಕು.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೇ, ಅಜೆಂಡಾದಲ್ಲಿರುವ 10 ಇಲಾಖೆಗಳ ಮೇಲಿನ ಬೇಡಿಕೆಗಳು ಮಾತ್ರ ಇಲ್ಲಿ ಮಂಡನೆಯಾಗಿದೆ. ಉಳಿದ 40 ಇಲಾಖೆಗಳ ಬೇಡಿಕೆಗಳು ಮಂಡನೆಯಾಗಿಲ್ಲ. ನಾವು ಯಾವುದರ ಮೇಲೆ ಚರ್ಚೆ ಮಾಡಬೇಕು? ಈ 10 ಇಲಾಖೆಗಳ ಬೇಡಿಕೆಗಳ ಮೇಲೋ ಅಥವಾ...

ಅಧ್ಯಕ್ಷರು :— ಈ ಸದನದಲ್ಲಿ ಯಾವ ಬೇಡಿಕೆಗಳನ್ನು ಸಂಬಂಧಿಸಿದ ಮಂತ್ರಿಗಳು ಮಂಡಿಸಿ, ಅನುಮತಿಯನ್ನು ಪಡೆದು ಯಾವುದು ಚರ್ಚೆಗೆ ಬಂದಿರುತ್ತದೆ, ಅದರ ಬಗ್ಗೆ ಮಾತ್ರ ಇಲ್ಲಿ ಚರ್ಚೆ ಮಾಡಬೇಕು.

ಶ್ರೀ ಯು.ಆರ್. ಸಭಾಪತಿ :— ಇವತ್ತು ಐದನೇ ತಾರೀಖು ಆಯಿತು. 10 ಇಲಾಖೆಗಳ ಬೇಡಿಕೆಗಳನ್ನು ಮಾತ್ರ ಮಂಡನೆ ಮಾಡಿದ್ದಾರೆ.

ಅಧ್ಯಕ್ಷರು :— ನಿಮ್ಮ ಮುಖಂಡರಿದ್ದಾರೆ. ಇಲ್ಲಿ ಬಂದು ಕುಳಿತುಕೊಂಡು ಚರ್ಚೆ ಮಾಡೋಣ ಉಳಿದ ಬೇಡಿಕೆಗಳನ್ನು ಏನು ಮಾಡಬೇಕು ಎಂದು.

ಶ್ರೀ ಯು.ಆರ್. ಸಭಾಪತಿ :— ಇನ್ನೂ ಎಷ್ಟು ದಿವಸ ಬೇಕು? ಉಳಿದ 40 ಬೇಡಿಕೆಗಳನ್ನು ಮಂಡನೆ ಮಾಡುವುದು ಯಾವಾಗ? ಮಾನ್ಯ ಮಂತ್ರಿಗಳು ಉತ್ತರ ಕೊಡುವುದು ಯಾವಾಗ?

ಅಧ್ಯಕ್ಷರು :— ತಾವು ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರ ಮಾರ್ಗದರ್ಶನವನ್ನು ಪಡೆದುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಎಲ್ಲಾ ಬೇಡಿಕೆಗಳನ್ನು ಅವರು ಇಲ್ಲಿ ಮಂಡಿಸಲಿ. ಯಾರಿಗೆ ಯಾವ ವಿಷಯ ಬೇಕೋ ಆ ವಿಷಯಗಳ ಮೇಲೆ ಮಾತನಾಡುತ್ತಾರೆ. ಇವಿಷ್ಟೇ ಬೇಡಿಕೆಗಳನ್ನು ಪಾಸ್ ಮಾಡುವುದಕ್ಕಿಂತ ಮುಂಚೆ ಉಳಿದ ಎಲ್ಲವನ್ನೂ ಮಂಡಿಸಲಿ.

ಅಧ್ಯಕ್ಷರು :— ಮಾನ್ಯ ರೆಡ್ಡಿಯವರೇ ನೀವು ಮಾತನಾಡಿ, ಇವರೆಲ್ಲಾ ಆಂಟಿ-ಕಮ್ಯುನಿಸ್ಟ್. ನಿಮಗೆ ತೊಂದರೆ ಮಾಡುವುದಕ್ಕೆ ಇದ್ದಾರೆ.

7. ವಿತ್ತೀಯ ಕಾರ್ಯಕಲಾಪಗಳು

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಈ ಸದನದ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳಲ್ಲಿ ಮುಖ್ಯವಾಗಿ ವ್ಯವಸಾಯ ಮತ್ತು ತೋಟಗಾರಿಕಾ ಇಲಾಖೆಯ ಬಗ್ಗೆ ನಾನು ಮೊದಲು ಮಾತನಾಡುತ್ತೇನೆ. ಮಾನ್ಯ ಬೈರೇಗೌಡರು ಕೃಷಿ ಮಂತ್ರಿಯಾಗಿ ನಾಲ್ಕೂವರೆ ವರ್ಷಗಳನ್ನು ಪೂರೈಸಿರುವುದಕ್ಕೋಸ್ಕರ ನಾನು ಅವರನ್ನು ಅಭಿನಂದನೆ ಮಾಡುತ್ತೇನೆ. ಬಹುಶಃ ಕರ್ನಾಟಕ ರಾಜ್ಯದಲ್ಲಿ ದೀರ್ಘಕಾಲದ ಕೃಷಿ ಮಂತ್ರಿಯಾಗಿ ಕಾರ್ಯ ನಿರ್ವಹಿಸಿರತಕ್ಕಂಥವರಲ್ಲಿ ಮಾನ್ಯ ಬೈರೇಗೌಡರೂ ಒಬ್ಬರು. ಪ್ರಾಮಾಣಿಕವಾಗಿ ಕೃಷಿ ರಂಗವನ್ನು ಅಭಿವೃದ್ಧಿಪಡಿಸಬೇಕು ಎಂದು ಕಾಳಜಿ ಇರತಕ್ಕಂಥವರಲ್ಲಿ ಅವರು ಕೂಡ ಒಬ್ಬರು. ಅವರ ಪ್ರಾಮಾಣಿಕತೆಯ ಬಗ್ಗೆ ನಮಗೆ ಯಾವುದೇ ರೀತಿಯಾದಂಥ ಅನುಮಾನವಿಲ್ಲ, ಭಿನ್ನಾಭಿಪ್ರಾಯವೂ ಇಲ್ಲ. ಮೊಟ್ಟಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಹೊಸ ಕೃಷಿ ನೀತಿಯನ್ನು ಜಾರಿಗೆ ತರಬೇಕುಎಂದು ಕೃಷಿ ನೀತಿಯನ್ನು ಅಳವಡಿಸಿರುವಂಥವರಲ್ಲಿ ಅವರೂ ಒಬ್ಬರು ಮತ್ತು ಆ ಇಲಾಖೆಯನ್ನು ಬಹಳ ಚುರುಕಗೊಳಿಸಬೇಕು ಎಂದು ಪ್ರಾರಂಭದಿಂದಲೂ ಬಹಳ ಪ್ರಯತ್ನ ಮಾಡಿದರು. ಇದರ ಜೊತೆಗೆ ಈಗ ಅವರಿಗೆ ತೋಟಗಾರಿಕೆ ಇಲಾಖೆಯೂ ಕೂಡ ಬಂದಿದೆ. ನಾನು